† ಶ್ರೀ ಎಂ. ಎಸ್. ಪಾಟೀಲ್.—ಈ ಭಾಗದಲ್ಲಿ ಇದೊಂದು ಮಹತ್ವದ ರಸ್ತೆಯಾದ ಕಾರಣ ಅಲ್ಲಿ ಒಂದು ಸೇತುವೆ ಬೇಕು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಶ್ರೀ ಎಸ್. ಬಂಗಾರಪ್ಪ.—ಬಂದಿದೆ.

ಶ್ರೀ ಎಂ. ಎಸ್. ಪಾಟೀಲ್—ಈ ಬಗ್ಗೆ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಮಾಡಿಸುತ್ತೇವೆ.

ಶ್ರೀ ಎಂ. ಎಸ್. ಪಾಟೀಲ್.—ಮಳೆಗಾಲದಲ್ಲಿ ಎರಡು ಮೂರು ತಿಂಗಳ ಕಾಲ ಈ ರಸ್ತೆ ಬಂದ್ ಆಗಿ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಆದಕಾರಣ ಈ ಸೇತುವೆ ಕೆಲಸವನ್ನು ಜಾಗ್ರತೆ ಮಾಡಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ನನ್ನ ಹತ್ತಿರವಿರುವ ವರದಿಯ ಪ್ರಕಾರ ಅಲ್ಲಿ ತಿಂಗಳುಗಟ್ಟಲೆ ಟ್ರಾಫಿಕ್ ಬಂದ್ ಆಗುವುದಿಲ್ಲ. ಆದರೆ ವರ್ಷದಲ್ಲಿ ೫-೬ ಸಲ ನಾಲ್ಕೈದು ದಿವಸಗಳವರೆಗೆ ಅಲ್ಲಿ ನೀರು ಬಂದು ತುಂಬುತ್ತದೆ. ಈ ಕಾರಣದಿಂದ ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ಜನರಿಗೆ ತೊಂದರೆಯಾಗುತ್ತಿರುವುದು ನಿಜ. ಈಗ ಅಲ್ಲಿ ಲೋ-ಲೆವಲ್ ಕಾಸ್-ವೇ ಇದೆ. ಅದನ್ನು ಹೈ-ಲೆವಲ್ ಬ್ರಿಡ್ಜ್ ಮಾಡಬೇಕಾಗುತ್ತದೆಂದು ನಮ್ಮ ಇಲಾಖೆಯವರು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಕಟ್ಟಿಸಲು ೧೫ ಲಕ್ಷ ರೂಪಾಯಿಗಳಾಗಬಹುದು. ಇದಕ್ಕೆ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿಸುತ್ತೇವೆ. ಆದರೆ ಕೂಡಲೇ ಮಾಡಿಸುವುದಕ್ಕಾಗುವುದಿಲ್ಲ ಹಣದ ಲಭ್ಯತೆ ನೋಡಿಕೊಂಡು ಇದನ್ನು ವಿಚಾರ ಮಾಡುತ್ತೇವೆ.

School Buildings in the Villages of Farntabad Hobli of Gulbarga Taluk

840 SRI S. F. BHAIRI (Shahabad), SRI B. V. KAKKILAYA (Vittal) and SRI PAMPAPATHI (Davanagere).—Will the Minister for Education be pleased to state ;—

(a) whether it has come to the notice of the Government that the school building in several villages of Farntabad Hobli of Gulbarga Taluka are left incompleted since ten years now :

(b) what action will the Government take to complete those buildings :

(c) when will the buildings be made suitable for running the schools in them ?

SRI B. SUBBAIAH SHETTY (Minister for Education).—

(a) Yes.

(b) Required funds will be allotted to complete these buildings.

(c) As soon as they are completed.

---

† indicates that remarks or speeches have not been revised by the member concerned.

ಶ್ರೀ ಎಸ್.ಎಫ್. ಭೈರಿ.—ಕಳೆದ ಹತ್ತು ವರ್ಷಗಳಿಂದ ಈ ಶಾಲಾ ಕಟ್ಟಡಗಳನ್ನು ಪೂರ್ಣಗೊಳಿಸದೆ ಹಾಗೆಯೇ ಬಿಟ್ಟಿರಲು ಕಾರಣವೇನು ?

†ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಆಲ್ಲಿ ೨೧ ಶಾಲಾ ಕಟ್ಟಡಗಳ ಕೆಲಸ ತೆಗೆದುಕೊಳ್ಳಲಾಗಿತ್ತು. ಆದರಲ್ಲಿ ೯ ಶಾಲಾ ಕಟ್ಟಡಗಳ ಕೆಲಸವನ್ನು ಪೂರ್ತಿ ಮಾಡಲಾಗಿದೆ. ಇನ್ನು ೧೨ ಶಾಲಾ ಕಟ್ಟಡಗಳ ಕೆಲಸ ಬೇರೆ ಬೇರೆ ಹಂತದಲ್ಲಿದೆ, ೧೯೭೮-೭೯ರಲ್ಲಿ ಪ್ರೈಮರಿ ಶಾಲಾ ಕಟ್ಟಡಗಳಿಗಾಗಿ ೯೭ ಲಕ್ಷದ ೩೦ ಸಾವಿರ ರೂ.ಗಳನ್ನು ಕೊಟ್ಟಿತ್ತು. ಇದನ್ನು ಬೇರೆಬೇರೆ ಜಿಲ್ಲೆಗಳಿಗೆ ಹಂಚಲಾಗಿತ್ತು. ಇದರ ಪ್ರಕಾರ ಗುಲ್ಬರ್ಗ ಜಿಲ್ಲೆಗೆ ೩ ಲಕ್ಷದ ೯೧ ಸಾವಿರದ ೫೦೦ ರೂ.ಗಳನ್ನು ಕೊಡಲಾಗಿತ್ತು. ಇದನ್ನು ಅಲ್ಲಿಯ ಎಲ್ಲಾ ತಾಲ್ಲೂಕುಗಳಿಗೂ ಹಂಚಿಕೊಟ್ಟಿದ್ದರಿಂದ ಈ ಭಾಗದಲ್ಲಿ ಎಲ್ಲ ಕೆಲಸಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈ ವರ್ಷದಲ್ಲಿ ಪೂರ್ತಿ ಮಾಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ವಿ. ಕಕ್ಕಿಲಾಯ.—ಕಳೆದ ಹತ್ತು ವರ್ಷಗಳಿಂದ ಈ ಕೆಲಸವನ್ನು ಪೂರ್ತಿ ಮಾಡದಿರುವ ಕಾರಣ, ಅರ್ಧ ಕಟ್ಟಿರುವ ಗೋಡೆಗಳು ಬಿದ್ದು ಹೋಗಿ ಸರ್ಕಾರಕ್ಕೆ ನಷ್ಟವಾಗಬಹುದು. ಆದಕಾರಣ ಅರ್ಧವಾಗಿರುವ ಕೆಲಸಗಳನ್ನು ಮೊದಲು ಮುಗಿಸಬೇಕೆಂದು ಆದೇಶ ಕೊಡುತ್ತೀರಾ? ಮತ್ತು ಇಲ್ಲಿ (ಅ)ಮತ್ತು (ಇ) ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರಗಳನ್ನು ನೋಡಿದರೆ ಈ ವರ್ಷವೇ ಈ ಕೆಲಸವನ್ನು ಮಾಡಿ ಮುಗಿಸುವ ಸೂಚನೆ ಕಂಡುಬರುತ್ತಿಲ್ಲ. ಈಗಲಾದರೂ ಅರ್ಧವಾಗಿರುವ ಕೆಲಸವನ್ನು ಮುಗಿಸಬೇಕೆಂದು ಆದೇಶ ಕೊಡುತ್ತೀರಾ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಆದಕ್ಕಾಗಿಯೇ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿನವರಿಗೆ ಹಣ ಕೊಡುವಾಗ ಪೂರ್ತಿಯಾಗದಿರುವ ಕಟ್ಟಡಗಳ ಕೆಲಸವನ್ನು ಮೊದಲು ಪೂರ್ತಿ ಮಾಡಬೇಕೆಂದು ಆದೇಶ ಕೊಡುವವರಿದ್ದೇವೆ.

Amount Spent on Slum Clearance

507 SRI T.R. SHAMANNA (Basavanagudi)—Will the Minister for Municipal Administra ion be pleased to state.—

(a) the amount spent by the Slum Clearance Board during the last three years on slum Clearance;

(b) (i) the amount spent to clear or improve slums in Bangalore City ;

(ii) the amount spent on establishment charges including the Chairman's establishment, of slum Clearance Board;

(c) the number of slums that were in Bangalore City before the Slum Board was formed and the number of slums now existing ;

(d) number of slums cleared or improved by the Slum Clearance Board ?

SRI H.C. SRIKANTAIAH.—(Minister for Municipal Administration.)

(a) Rs. 20, 01, 402-58

(b) Rs. 44, 651.00 (upto end of 1977-78),
Rs. 11, 53, 541.25

(c) No. of identified slums before the formation of the Board.	Total No. of Slums identified in Bangalore City as on 31-12-1978.
180	306